**ಐದನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಲಯ, ಮೇಯೋಹಾಲ್ ವಿಭಾಗ, ಬೆಂಗಳೂರು.**

**ದಿಃ 06.11.2024.ರಂದು ಸಾಕ್ಷಿದಾರರಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದಃ**

ನಿಪಿ.5 ರಲ್ಲಿ ನಮೂದಿಸಿರುವ ಮೊತ್ತಕ್ಕೆ ಆರೋಪಿತರು ಎಷ್ಟು ಪರ್ಚೇಸ್ ಆರ್ಡರ್ ನೀಡಿದ್ದರು ಎಂದು ಗೊತ್ತಿಲ್ಲ. ನಿಪಿ.5 ರಲ್ಲಿ ನಮೂದಿಸಿರುವ ಮೊತ್ತಕ್ಕೆ ಸುಮಾರು ಆರು ಇನವಾಯ್ಸಗಳನ್ನು ರೈಜ್ ಮಾಡಿದ್ದೇವೆ. ಅವುಗಳನ್ನು ಸಲ್ಲಿಸಿದ್ದೇನೆ. ನಿಪಿ.3 ರಂತೆ ಒಂದೇ ಇನವಾಯ್ಸ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನಿಪಿ.3 ರ ಮೊತ್ತ ರೂ.4,39,818/- ಎಂದರೆ ಸರಿ. ಸದರಿ ಮೊತ್ತಕ್ಕೆ ನಿಪಿ.5 ರಲ್ಲಿರುವ ಮೊತ್ತ ತಾಳೆಯಾವುದಿಲ್ಲ ಎಂದರೆ ಸಾಕ್ಷಿ, ಆರೋಪಿತರು ನಿಪಿ.5 ರಲ್ಲಿ ನಮೂದಿಸಿರುವ ಮೊತ್ತ ಪಾವತಿಸಲು ಬಾಕಿ ಇದ್ದಾರೆ ಎನ್ನುತ್ತಾರೆ. 2015 ರಿಂದ 2017 ರವರೆಗೆ ಆರೋಪಿತರು ಸಲ್ಲಿಸಿರುವ ಪರ್ಚೇಸ್ ಆರ್ಡರ್ ಗಳನ್ನು ಸಲ್ಲಿಸುತ್ತೇನೆ. ನಿಪಿ.4 ಕ್ಕೆ 2 ರಿಂದ 4 ನೇ ಆರೋಪಿತರು ಸಹಿ ಮಾಡಬೇಕಾಗಿತ್ತು ಎಂದರೆ ಸಾಕ್ಷಿ, 3 ನೇ ಆರೋಪಿ ಮಾತ್ರ ಲಭ್ಯವಿದ್ದು, 2,4 ನೇ ಆರೋಪಿತರು ಆ ಸಮಯದಲ್ಲಿ ಲಭ್ಯವಿರಲಿಲ್ಲ ಎನ್ನುತ್ತಾರೆ. ನಿಪಿ.4 ಕ್ಕೆ 2,4 ನೇ ಆರೋಪಿತರ ಸಹಿ ಪಡೆಯಲು ಪ್ರಯತ್ನಿಸಿದ್ದೇವೆ, ಅವರು ಸಿಕ್ಕಿರಲಿಲ್ಲ. ಅವರು ಕಛೇರಿಯಲ್ಲಿ ಇದ್ದರು ಸಹ, ನೀವು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ರೂ.13,54,393.93/-ಗೆ ಇನವಾಯ್ಸಗಳನ್ನು ಸಲ್ಲಿಸಿದ್ದೀರಿ ಎಂದರೆ ಸರಿ. ಸದರಿ ಮೊತ್ತಕ್ಕೂ ನಿಪಿ.5 ರಲ್ಲಿ ನಮೂದಿಸಿರುವ ಮೊತ್ತಕ್ಕು ತಾಳೆ ಇಲ್ಲ ಎಂದರೆ ಸರಿ, ಸಾಕ್ಷಿ ಆರೋಪಿತರು ಸರಿಯಾಗಿ ಹಣ ಪಾವತಿಸುತ್ತಿರಲಿಲ್ಲ, ಆ ಕಾರಣ ವ್ಯತ್ಯಾಸ ಇದೆ ಎನ್ನುತ್ತಾರೆ. ನೀವು, 3 ನೇ ಆರೋಪಿ ಸೇರಿಕೊಂಡು ಇನವಾಯ್ಸಗಳನ್ನು ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ. ನಿಪಿ.5 ಕ್ಕೆ 2,4 ನೇ ಆರೋಪಿತರು ಸಹಿ ಮಾಡಬೇಕಿತ್ತು ಎಂದರೆ ಸರಿಯಲ್ಲ. ನೀವು, 3 ನೇ ಆರೋಪಿ ಶಾಮೀಲಾಗಿ ನಿಪಿ.5 ನ್ನು ಬಳಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ನೋಟಿಸಗಳು ಆರೋಪಿತರ ಮನೆ ವಿಳಾಸಕ್ಕೆ ನೀಡಿದ್ದೀರಿ ಎಂದರೆ ಸರಿ, ಸಾಕ್ಷಿ ಪಾಲುದಾರಿಕೆ ಸಂಸ್ಥೆ ಸ್ಥಗಿತಗೊಂಡಿತ್ತು ಎನ್ನುತ್ತಾರೆ, 2,4 ನೇ ಆರೋಪಿತರ ಮನೆ

ವಿಳಾಸವನ್ನು 3 ನೇ ಆರೋಪಿಯಿಂದ ಪಡೆದಿದ್ದೀರಿ ಎಂದರೆ ಸರಿಯಲ್ಲ. ಪಾಲುದಾರಿಕೆ ಸಂಸ್ಥೆ ಸ್ಥಗಿತಗೊಂಡ ನಂತರ ಆರೋಪಿತರು ವ್ಯವಹರಿಸುತ್ತಿರಲಿಲ್ಲ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ನಂತರ 3 ನೇ ಆರೋಪಿತರು ನಿಮ್ಮೊಂದಿಗೆ ವ್ಯವಹಾರ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಆ ಕಾರಣ ನಿಪಿ.4 ಕ್ಕೆ 2,4 ನೇ ಆರೋಪಿತರು ಸಹಿ ಮಾಡಿಲ್ಲ ಎಂದರೆ ಸಾಕ್ಷಿ, ನಿಪಿ.4 ಕ್ಕೆ ಪಾಲುದಾರಿಕೆ ಸಂಸ್ಥೆ ಸ್ಥಗಿತಗೊಳ್ಳುವ ಪೂರ್ವದಲ್ಲೇ 3 ನೇ ಆರೋಪಿ ಸಹಿ ಮಾಡಿದ್ದರು ಎನ್ನುತ್ತಾರೆ. ಆ ಸಂಬಂಧ ಯಾವುದೆ ಲಿಖಿತ ದಾಖಲೆ ಇಲ್ಲ. 2015-16 ರಲ್ಲಿ 1 ನೇ ಆರೋಪಿ ಸಂಸ್ಥೆ ವ್ಯವಹಾರ ನಡೆಸುತ್ತಿತ್ತು. ಪಾಲುದಾರಿಕೆ ಸಂಸ್ಥೆ ಸ್ಥಗಿತವಾಗಿತ್ತು ಎಂದು ತೋರಿಸಲು ನನ್ನ ಬಳಿ ಯಾವುದೆ ದಾಖಲೆ ಇಲ್ಲ. ಪಾಲುದಾರಿಕೆ ಅಂತ್ಯಗೊಂಡ ನಂತರವು 3 ನೇ ಆರೋಪಿ ನಮ್ಮ ಸಂಪರ್ಕದಲ್ಲಿ ಇದ್ದರು. 2,4 ನೇ ಆರೋಪಿತರು ನಿಮ್ಮ ಸಂಪರ್ಕದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. 2015-16 ರಲ್ಲಿ ಆರೋಪಿತರು ಎಷ್ಟು ಹಣ ಪಾವತಿಸಲು ಬಾಕಿ ಇದ್ದರು ಎಂದು ಗೊತ್ತಿಲ್ಲ. ಆರೋಪಿತರು ನಿಮ್ಮೊಂದಿಗೆ ವ್ಯವಹಾರ ಮಾಡಿಲ್ಲದ ಕಾರಣ, ನಿಮ್ಮಲ್ಲಿ ಸರಿಯಾದ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಆ ಕಾರಣ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. 2 ರಿಂದ 4 ನೇ ಆರೋಪಿತರು ಜಾಮೀನು ಪಡೆದ ನಂತರ 3 ನೇ ಆರೋಪಿ ನ್ಯಾಯಾಲಯಕ್ಕೆ ಹಾಜರಾಗುತ್ತಿಲ್ಲ ಎಂದರೆ ಸರಿ. 3 ನೇ ಆರೋಪಿ ರಾಜಿಗೆ ಒಪ್ಪಿಕೊಂಡಿದ್ದರು ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಪಾಲುದಾರಿಕೆ ಸಂಸ್ಥೆಯ ಬಗ್ಗೆ ಯಾವುದೆ ದಾಖಲೆ ಪಡೆದಿಲ್ಲ. ಪಾಲುದಾರರ ವಿವರಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಪಾಲುದಾರಿಕೆಯ ದಾಖಲೆಗಳು 3 ನೇ ಆರೋಪಿಯ ಬಳಿ ಇದೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿತರು ಯಾವುದೇ ಹಣ ಪಾವತಿಸಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. 2,4 ನೇ ಆರೋಪಿಗೆ ನೋಟಿಸ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ನೀವು ಹಾಗೂ 3 ನೇ ಆರೋಪಿ ಸೇರಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ. ಹೇ.ಕೇ. ಸರಿ ಇದೆ.

ಐದನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಲಯ,

**SCCH-20** **CC -59769/2018**

**PW-1**

ಮೇಯೋಹಾಲ್ ವಿಭಾಗ, ಬೆಂಗಳೂರು.